ಕೆನಡಾ, ಅಮೆರಿಕ ಮೊದಲಾದ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಮತ್ತೆ ಹೌದು ಸೆರ್ಬಿಯನ್ನರಿಗೆ ಅವರ ಭಾಷೆ, ಸಂಸ್ಕೃತಿ, ಪರಂಪರೆಯ ಬಗ್ಗೆ ಬಹಳ ಹೆಮ್ಮೆ. Nikola Tesla and Novak Dokovi ರನ್ನು ಕಂಡರೆ ನಮಗೆ ವಿಪರೀತ ಗೌರವ. ಇವರಿಂದಾಗಿ ಯುರೋಪಿನಲ್ಲಿ ಸೆರ್ಬಿಯಾ ಎಂಬ ಪುಟ್ಟ ದೇಶ ಇರೋದು ಪ್ರಪಂಚಕ್ಕೆ ತಿಳಿಯೋ ಹಾಗೆ ಆಯ್ತು.

**◆ ನಿಮ್ಮ ಸಾಕು ನಾಯಿ ಹಾಗೂ ಮುದ್ದಿನ ಬೆಕ್ಕು ಬಿಟ್ಟು, 'ಇಂಥವರ ಜೊತೆ ಇದ್ರೆ , ಭಾಳ ಕಂಫರ್ಟಾಗಿ ಇರಬಲ್ಲೆ' ಅಂತ ಅನಿಸುವ ವ್ಯಕ್ತಿ ನಿಮ್ಮ ಬದುಕಲ್ಲಿ ನಿಮಗೆ ಯಾರಾದರೂ ಸಿಕ್ಕಿದ್ದಾರ?**

(ನಗು) ಸದ್ಯಕಂತೂ ಮಕ್ಕಳು ಮತ್ತು ಮರಗಳು

**◆ ನಿಮಗೆ ಭಯ ಹುಟ್ಟಿಸುವ ಸಂಗತಿ ಯಾವುದು?**

ನಲವತ್ತರ ಗಡಿದಾಟಿದ ಮೇಲೆ, ನನ್ನನ್ನು ಹೆದರಿಸುವ ಯಾವುದಾದರೂ ಈಗ ಉಳಿದಿದೆ ಅಂತ ನಿಮಗೆ ಅನ್ಸುತ್ತಾ!?

**◆ ನಿಮಗೆ ಒಪ್ಪಿಗೆ ಇದ್ದರೆ ನಿಮ್ಮ ಜೀವನದ ಒಂದು ಸಿಹಿ ಮತ್ತು ಕಹಿ ನೆನಪು ಹಂಚಿಕೊಳ್ಳಿ**

ನಾವೊಂದು ಸಣ್ಣ ಪಟ್ಟಣದಲ್ಲಿ ವಾಸಿಸುತ್ತಿದ್ದೆವು. ನನಗಾಗ ಏಳೋ, ಎಂಟೊ ವರ್ಷ. ಚಳಿಗಾಲದ ದಿನಗಳವು. ನಾನು ಮತ್ತೆ ನನ್ನ ತಮ್ಮ ಹೊಸ ವರ್ಷದ ಗ್ರೀಟಿಂಗ್ ಕಾರ್ಡ್‌ಗಳನ್ನು ಕೊಂಡು ಪೋಸ್ಟ್ ಮಾಡುತ್ತಿದ್ದೆವು. ಮತ್ತೆ ಸಂಬಂಧಿಕರು, ಕುಟುಂಬ ಸ್ನೇಹಿತರು, ಆಪ್ತ ಬಳಗದವರು ಕಳುಹಿಸುತ್ತಿದ್ದ ಕಾರ್ಡ್‌ಗಳನ್ನು ತಂದುಕೊಡುವ ಪೋಸ್ಟ್ ಮ್ಯಾನ್‌ಗಾಗಿ ತವಕದಿಂದ ಕಾಯುತ್ತಿದ್ದೆವು. ಈ ಚಿತ್ರಣ ನಾನು ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳುವ Fairy taleನಂತೆ ಈಗಲೂ ನನ್ನನ್ನ ಕಾಡುತ್ತದೆ. ಮತ್ತೆ ನನ್ನ ಮಕ್ಕಳು ಸಣ್ಣವರಿದ್ದಾಗ ಅವರೊಂದಿಗೆ ಕಳೆದ ಮುಗ್ಧ ಕ್ಷಣಗಳು ನನ್ನ ಬಾಳಿನ ಇತರ ಸಿಹಿ ನೆನಪುಗಳ ಸಾಲಿಗೆ ಸೇರುತ್ತವೆ. ನನ್ನ ಮಾಜಿ ಅತ್ತೆ 'ನಿನ್ನಷ್ಟು ಒಳ್ಳೆಯ ತಾಯಿಯನ್ನು ನೋಡೇ ಇಲ್ಲ' ಅಂತ ಯಾವಾಗಲೂ ಹೇಳ್ತಿದ್ರು. ಕಹಿ ನೆನಪುಗಳ ಬಗ್ಗೆ ಹೇಳೋದಾದ್ರೆ ನಾನವುಗಳನ್ನೆಲ್ಲಾ ಹಿಂದೆಯೇ ಬಿಟ್ಟು ಪ್ರಸ್ತುತದಲ್ಲಿ ಬದುಕುತ್ತಿದ್ದೇನೆ. ಮತ್ತೆ ಒಂಟಿ ಹೆಣ್ಣಿನ ಬದುಕಿನಲ್ಲಿ ಯಾವ ಕಹಿ ನೆನಪು ಇರಲು ಸಾಧ್ಯ ನೀವೇ ಹೇಳಿ?.

**◆ ನಿಮ್ಮ ಮೊದಲ ಮುತ್ತಿನ ಅನುಭವ ನೆನಪಿದೆಯಾ? ಆ ನಿರ್ದಿಷ್ಟ ಘಟನೆ ನಿಮ್ಮ ಒಪ್ಪಿಗೆ ಮೇರೆಗೆ ಜರುಗಿತಾ? ಆ ಘಟನೆಯನ್ನು ನೆನಪಿಸಿಕೊಳ್ಳಬಹುದಾ?**

ನಿಮ್ಮ ಹೃದಯವನ್ನು ಮುಟ್ಟಿದ್ದು ಯಾವುದೇ ಇರಲಿ, ಅದನ್ನು ಬೀಳ್ಕೊಡುವುದು ಅಷ್ಟು ಸುಲಭದ ಕೆಲಸವಲ್ಲ. ಬಹುಶಃ ಎಲ್ಲಾ ಹುಡುಗಿಯರ ಬದುಕಿನಲ್ಲೂ, ಅವಳಾಗೇ ಮನಸು ಮಾಡದ ಹೊರತು, 'ಮುತ್ತು' ಅನ್ನೋದು ಯಾವಾಗಲೂ ಅನಿರೀಕ್ಷಿತ ಅನುಭವ.

ನನ್ನ ಬಾಲ್ಯದ ಗೆಳೆಯನೊಬ್ಬ ನಾವು ಆಟ ಆಡುವಾಗ ಹಲವು ಸಲ ನನ್ನನ್ನ ಚುಂಬಿಸಿದ್ದ. ನನಗಾಗ 5 ವರ್ಷ. ಹ ಹ ಹ... ಈಗ ನೆನೆದರೆ ತಮಾಷೆ ಅನಿಸುತ್ತೆ. ಎಲ್ಲರ ಬಾಲ್ಯದ ದಿನಗಳಲ್ಲೂ ಈ ಥರದ ಘಟನೆಗಳು ಸರ್ವೇ ಸಾಮಾನ್ಯ.

**◆ ನಿಮಗೆ ಯಾವತ್ತಾದರೂ, ಯಾರನ್ನಾದರು ಕೊಲೆ ಮಾಡಬೇಕು ಅನ್ಸಿತ್ತಾ?**

ಸಾಕಷ್ಟು ಸಲ... ಅದೊಂತರ ಕ್ಷಣಿಕ ಕೋಪ ಅಷ್ಟೆ. ಆದರೂ ಆ ಅಸಹಾಯಕ ಸಿಟ್ಟು ಅದೆಷ್ಟು ನಿಜ ಅನ್ಸುತ್ತೆ ಗೊತ್ತಾ?

**◆ ನಿಮ್ಮ ನೆಚ್ಚಿನ ಹಣ್ಣು, ಋತು, ಪಾನೀಯ, ಊಟ ಯಾವುದು? ಮತ್ತೆ ಅದೇ ಯಾಕೆ?**

ಕಿತ್ತಳೆ ಅಂದರೆ ನಂಗೆ ತುಂಬಾನೇ ಇಷ್ಟ. ಚಳಿಗಾಲವನ್ನ ನಾನು ಸಂಭ್ರಮಿಸುತ್ತೇನೆ. ನಾನು ಹುಟ್ಟಿದ್ದು ಕೂಡ ಚಳಿಗಾಲದಲ್ಲಿ. ಇಡೀ ವರ್ಷದಲ್ಲಿ ಕ್ರಿಸ್‌ಮಸ್ ಈವ್‌ನ ದಿನ ನನಗಿಷ್ಟ. ಖಂಡಿತವಾಗಿ ಕಾಫಿ ಅಂದ್ರೆ ಪ್ರಾಣ ನನಗೆ. ಮರ್ವಾಯಿ - ಕಪ್ಪೆ ಚಿಪ್ಪಲ್ಲಿ ಇರುತ್ತಲ್ಲ ಅದು- ಮತ್ತೆ ನೂಡಲ್ಸ್ ಅನ್ನು ನಾನಿಷ್ಟ ಪಡ್ತೀನಿ. ಯಾಕೆ ಅಂದ್ರೆ ಏನ್ ಹೇಳಲಿ? ಯಾರಿಗೆ ಗೊತ್ತು? ರುಚಿಯನ್ನು ಚರ್ಚೆ ಮಾಡೋದು ಕಷ್ಟ ಅಲ್ವಾ?

●